ಪಿ ಡಬ್ಲು 2

ದಿನಾಂಕಃ 23-09-2022.

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀಸವಾಲುಃ 14 ಹಾಗೂ 16 ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಂ.ಎನ್. ವಕೀಲರಿಂದ,**

ನಮ್ಮ ಕುಟುಂಬದ ಮೂಲ ಪುರಷನ ಹೆಸರು ಬೋಳಾ ಈರಾ ವೆಂಕಟರಮಣ ನಾಯ್ಕ ಎಂದು ಇರುತ್ತದೆ. ಸದರಿ ಯವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಇಬ್ಬರು ಗಂಡು ಮಕ್ಕಳು ಐದು ಹೆಣ್ಣು ಮಕ್ಕಳು ಎಂದರೆ ಸರಿ. ಸದರಿಯವರ ಗಂಡು ಮಕ್ಕಳ ಹೆಸರು 1. ಸೋಮಯ್ಯ ಬೋಳ ನಾಯ್ಕ , 2. ದುರ್ಗಪ್ಪ ನಾಯ್ಕ ಮತ್ತು ಹೆಣ್ಣು ಮಕ್ಕಳ ಹೆಸರು 1. ಜಟ್ಟು ಕೋಂ ರಾಮ ನಾಯ್ಕ, 2. ದೇವಮ್ಮ ಕೋಂ ಜಟ್ಟ ನಾಯ್ಕ, 3. ಸಣ್ಣಗು ಕೋಂ ನಾಗಪ್ಪ ನಾಯ್ಕ, 4. ದೇವಮ್ಮ ಕೋಂ ಜಟ್ಟ ನಾಯ್ಕ ಮತ್ತು 5. ಮಾಸ್ತಿ ಕೋಂ ನಾರಾಯಣ ನಾಯ್ಕ ಎಂದರೆ ಸರಿ.

ಈರಾ ಬೋಳಾ ನಾಯ್ಕ ರವರು ನನ್ನ ಅಜ್ಜ ಮರಣ ಹೊಂದುವ ಪೂರ್ವದಲ್ಲಿ ಮರಣ ಹೊಂದಿರುತ್ತಾರೆ. ನಮ್ಮ ಅಜ್ಜ ಬೋಳಾ ಈರಾ ತಾನು ಸಾಗುವಳಿ ಮಾಡಿಕೊಂಡು ಬರುತ್ತಿದ್ದ ಆಸ್ತಿಗೆ ತನ್ನ ಜೀವಿತ ಅವಧಿಯಲ್ಲಿ ಭೂ ಸುಧಾರಣಾ ಕಾಯ್ದೆಯಡಿ ಅರ್ಜಿ ಹಾಕಿ ಮಂಜೂರು ಮಾಡಿಕೊಂಡಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಯ ಸರ್ವೆ ನಂ. 680/14 ರನ್ನು ಹೊರತು ಪಡಿಸಿ ಉಳಿದ ದಾವಾ ಆಸ್ತಿಗಳು ನನ್ನ ಅಜ್ಜ ಬೋಳಾ ಈರಾನು ಸರಕಾರದಿಂದ ಮಂಜೂರು ಮಾಡಿಕೊಂಡಿರುತ್ತಾನೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನಮ್ಮ ಅಜ್ಜ ಬೋಳಾ ಈರಾ ಮರಣ ಹೊಂದಿದ ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ಚಿಕ್ಕಪ್ಪನ ನಡುವೆ ದಾವಾ ಆಸ್ತಿಗಳು ಪಾಲು ಆಗಿರುವುದರಿಂದ ಈಗ ನನಗೆ ಮತ್ತು ನನ್ನ ಚಿಕ್ಕಪ್ಪನ ಮಕ್ಕಳ ನಡುವೆ ಆಸ್ತಿಯಲ್ಲಿ ಪಾಲು ಆಗುವುದು ಅವಶ್ಯಕತೆ ಇಲ್ಲ ಎಂದರೆ ಸರಿ.

ನನ್ನ ತಂದೆ ಮತ್ತು ಚಿಕ್ಕಪ್ಪನ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿದ್ದೀರಾ? ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದ ಪತ್ರ ತಯಾರಿಸಲು ನಮ್ಮ ವಂಶಾವಳಿಯನ್ನು ವಕೀಲರಿಗೆ ನಾನೇ ತಿಳಿಸಿರುತ್ತೇನೆ. ವಕೀಲರಿಗೆ ನಾನು ನನ್ನ ತಂದೆ ಮತ್ತು ಚಿಕ್ಕಪ್ಪನ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಲು ತಿಳಿಸಿರುತ್ತೇನೆ. ದಾವಾ ಹಾಕುವ ಪೂರ್ವದಲ್ಲಿ ವಾದ ಪತ್ರವನ್ನು ಪರಿಶೀಲನೆ ಮಾಡಿ ಓದಿ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿ.

ನಾನು ಎಂಟನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿ ಬಿ.ಎಸ್.ಎನ್.ಎಲ್ ಸಂಸ್ಥೆಯಲ್ಲಿ ಲೈನ್ ಮ್ಯಾನ್ ಆಗಿ ಕೆಲಸ ಮಾಡುತ್ತಿದ್ದೇನೆ. ವಾದ ಪತ್ರದಲ್ಲಿ ನಮ್ಮ ಕುಟುಂಬದ ವಂಶಾವಳಿ ತೋರಿಸಲಾಗಿದೆ ಎಂದರೆ ಸರಿ. ವಾದ ಪತ್ರದ ವಂಶಾವಳಿಯಲ್ಲಿ ಮೃತ ಈರಾನಿಗೆ ಎರಡು ಗಂಡು ಮಕ್ಕಳು ಎಂದು ತೋರಿಸಲಾಗಿದೆ ಎಂದರೆ ಸರಿ. ಅದೇ ರೀತಿ ಮೃತನಿಗೆ ಐದು ಜನ ಹೆಣ್ಣು ಮಕ್ಕಳು ಇದ್ದಾರೆ ಎಂದು ತೋರಿಸಿಲ್ಲ ಎಂದರೆ ಸರಿ. ಕಾನೂನಿನ ಪ್ರಕಾರ ನನ್ನ ತಂದೆ ಮತ್ತು ಚಿಕ್ಕಪ್ಪನ ಸಹೋದರಿಯರಿಗೆ ಅಂದರೆ ನನ್ನ ಅತ್ತೆಯರಿಗೆ ಆಸ್ತಿಯಲ್ಲಿ ಪಾಲು ಬರುತ್ತದೆ ಎಂದರೆ ಸರಿ. ನನ್ನ ಅತ್ತೆಯರು ಅವಶ್ಯಕ ಪಕ್ಷಗಾರರಿದ್ದು ಅವರಿಗೂ ದಾವಾ ಆಸ್ತಿಯಲ್ಲಿ ಪಾಲು ಇದ್ದು ಅವರನ್ನು ಪಕ್ಷಗಾರರನ್ನಾಗಿ ಮಾಡದೇ ಇದ್ದುದರಿಂದ ನಾನು ಕೇಳಿದಂತೆ ಪರಿಹಾರ ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ ಸರ್ವೆ ನಂ.680 ನಮ್ಮ ಅಜ್ಜನಿಂದ ಮೂಲಗೇಣಿ ವಾರಸುನಾತೆಯಿಂದ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂ.680 ನಮ್ಮ ಜಮೀನಿಗೆ ನನ್ನ ಅಜ್ಜ ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ ವಿಚಾರ ನನಗೆ ಗೊತ್ತಿಲ್ಲ. ಸರ್ವೆ ನಂ.680 ನ್ನು ನನ್ನ ಅಜ್ಜನಿಗೆ ರೈತ ನಾತೆಯಿಂದಾಗಲೀ, ಮೂಲಗೇಣಿ, ಚಾಲಗೇಣಿ, ಸಾದಾ ರೈತ ನಾತೆಯಿಂದ ಪ್ರಾಪ್ತವಾದ ಜಮೀನು ಅಲ್ಲದೇ ಇರುವುದರಿಂದ ಭೂನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಸರ್ವೆ ನಂ.680 ನನ್ನ ಅಜ್ಜನಿಗೆ ಮೂಲಗೇಣಿಯಿಂದ ಬಂದಿರುವುದನ್ನು ತೋರಿಸುವುದಕ್ಕೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಸರ್ವೆ ನಂ.680 ನನ್ನ ಅಜ್ಜನಿಗೆ ಮೂಲಗೇಣಿಯಿಂದ ಬಂದಿರುವುದಿಲ್ಲ ಆದ್ದರಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ದಾವಾ ಸರ್ವೆ ನಂ.680 ನ್ನು ಅವರ ಜೀವಿತಾವಧಿಯಲ್ಲಿ ಯಾವತ್ತೂ ಸಾಗುವಳಿ ಮಾಡುತ್ತಿರಲಿಲ್ಲ ಅದಕ್ಕಾಗಿ ಅವರು ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

1956 ರ ಪೂರ್ವದಲ್ಲಿ ದಾವಾ ಸರ್ವೆ ನಂ.680 ಮಾಲತಃ ಅಪ್ಪು ಮಂಜಪ್ಪ ಕೋಣಾರಕೇರಿ ಅವರಿಗೆ ಸೇರಿತ್ತು ಎಂದರೆ ನನಗೆ ಗೊತ್ತಿಲ್ಲ. ನಿಪಿ–16 ರಂತೆ ಸದರಿ ಅಪ್ಪು ಮಂಜಪ್ಪ ಕೊಣಾರಕೇರಿ ಸನ್ 1989 ರಲ್ಲಿ ಹೆಸರು ದಾಖಲಾಗಿದೆ ಎಂದರೆ ಸರಿ. ನಂತರ ಸದರಿ ಅಪ್ಪು ಮಂಜಪ್ಪ ಕೋಣಾರಕೇರಿ ರವರು ದಾವಾ ಆಸ್ತಿ 680 ನ್ನು ನನ್ನ ತಂದೆಗೆ ಮತ್ತು ಚಿಕ್ಕಪ್ಪನಿಗೆ ಕಬೂಲಿ ನಾತೆಯಿಂದ ಬಿಟ್ಟುಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪ್ಪು ಮಂಜಪ್ಪ ಕೋಣಾರಕೇರಿ ಅವರು ಕಬೂಲಿ ಪತ್ರ ನೀಡಿದಂತೆ ಎಂ.ಆರ್ ನಲ್ಲಿ ನಮೂದಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.680 ಇದು ನನ್ನ ತಂದೆ ಮತ್ತು ಚಿಕ್ಕಪ್ಪನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ.

ದಾವಾ ಸರ್ವೆ ನಂ.680 ನನ್ನ ತಂದೆಗೆ ಮತ್ತು ಚಿಕ್ಕಪ್ಪನಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ದಾವಾ ಆಸ್ತಿ 680 ರಲ್ಲಿ 36 ಗುಂಟೆ ಜಮೀನನ್ನು 2 ನೇ ಪ್ರತಿವಾದಿ ಹೆಸರಿಗೆ ದಾನ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಸಮ್ಮತಿ ಮತ್ತು ಸಹಿ ಇಲ್ಲದೇ ಮಾಡಿಕೊಟ್ಟಿರುತ್ತಾರೆ ಎನ್ನುತ್ತಾರೆ. ಸದರಿ ದಾನ ಪತ್ರಕ್ಕೆ ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಂಡತಿ ಮತ್ತು ಮಕ್ಕಳು ಸಹಿ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಸಹಿ ಮಾಡಿರುವ ವಿಚಾರ ನನಗೆ ಈ ಪ್ರಕರಣ ದಾಖಲಿಸುವಾಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ದಾವಾ ಆಸ್ತಿ 680 ರಲ್ಲಿ ಉಳಿದ 36 ಗುಂಟೆ ಜಮೀನು ನನ್ನ ಚಿಕ್ಕಪ್ಪನ ಪಾಲಿಗೆ ಬಂದಿದ್ದು ನನ್ನ ಚಿಕ್ಕಪ್ಪ ಮರಣ ಹೊಂದಿದ ನಂತರ ಅವರ ವಾರಸುದಾರರಾದ ಹೆಂಡತಿ ಮತ್ತು ಮಕ್ಕಳು ಸೇರಿಕೊಂಡು 12 ನೇ ಪ್ರತಿವಾದಿ ಅಬ್ದುಲ್ ಖಾದರ್ ಬಿನ್ ಅಬ್ದುಲ್ ಸಾಬ್ ಇವರಿಗೆ ನೊಂದಾಯಿತ ಕ್ರಯ ಪತ್ರದ ಪ್ರಕಾರ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಿನದವರೆಗೆ ಸದರಿಯವರು ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಅದೇ ರೀತಿ ಕ್ರಯಪತ್ರವನ್ನು ಸಹ ತೆಗೆದು ನೋಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಕ್ರಯ ಪತ್ರ ಹಾಜರುಪಡಿಸಿರುತ್ತೇನೆ ಎಂದು ನುಡಿಯತ್ತಾರೆ. ನಾನು ಹಾಜರುಪಡಿಸಿದ ನಿಪಿ-2 ಕ್ರಯ ಪತ್ರದಲ್ಲಿ ನನ್ನ ತಂದೆ ಮತ್ತು ಚಿಕ್ಕಪ್ಪನ ಹೆಂಡತಿ ಮಕ್ಕಳು ಆಸ್ತಿಯನ್ನು ತಮ್ಮ ಹಣಕಾಸಿನ ಅಡಚಣೆಗಾಗಿ ಮಾರಾಟ ಮಾಡಲಾಗಿದೆ ಎಂದು ಬರೆಯಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

12 ನೇ ಪ್ರತಿವಾದಿ ಅಬ್ದುಲ್ ಖಾದರ್ ಬಿನ್ ಅಬ್ದುಲ್ ಸಾಬ್ ಇವರು ದಾವಾ ಸರ್ವೆ ನಂ.680 ನ್ನು ಕ್ರಯ ಪಡೆದುಕೊಂಡ ನಂತರ 8 ಗುಂಟೆ ಜಮೀನನ್ನು 14 ನೇ ಪ್ರತಿವಾದಿ ಗಣಪತಿ ಇವರಿಗೆ ಮತ್ತು 4 ಗುಂಟೆ ಜಮೀನನ್ನು 16 ನೇ ಪ್ರತಿವಾದಿ ವೆಂಕಟೇಶನಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ನನ್ನ ತಂದೆ ಮೃತ ಹೊಂದಿದ ನಂತರ ನನಗೆ ಗೊತ್ತಾಗಿದೆ ಎನ್ನುತ್ತಾರೆ. ಸದರಿ ಪ್ರತಿವಾದಿ 14 ಮತ್ತು 16 ರವರು 12 ನೇ ಯವರಿಂದ ಕ್ರಯಕ್ಕೆ ಪಡೆದುಕೊಂಡಿರುವುದರಿಂದ ಕಬ್ಜಾ ವಹಿವಾಟಿನಲ್ಲಿದ್ದಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

ದಾವಾ ಸರ್ವೆ ನಂ.680 ಜಮೀನು ನನ್ನ ತಂದೆ ಮತ್ತು ಚಿಕ್ಕಪ್ಪನ ಸ್ವಯಾರ್ಜಿತ ಆಸ್ತಿಇದ್ದು ಅದಕ್ಕಾಗಿ ಅವರು 36 ಗುಂಟೆ ದಾನ ಪತ್ರ ಮತ್ತು ಇನ್ನುಳಿದ 36 ಗುಂಟೆ ಜಮೀನನ್ನು 12 ನೇ ಪ್ರತಿವಾದಿಗೆ ಮಾರಾಟ ಮಾಡಿ ಆನಂತರದ ದಿನಗಳಲ್ಲಿ 14 ಮತ್ತು 16 ಪ್ರತಿವಾದಿಗಳಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.680 ನನ್ನ ತಂದೆ ಮತ್ತು ಚಿಕ್ಕಪ್ಪನ

ಸ್ವಯಾರ್ಜಿತ ಆಸ್ತಿಇರುವುದರಿಂದ ಅವರು ಮಾರಾಟ ಮಾಡಿರುವುದನ್ನು ನನಗೆ ಪ್ರಶ್ನಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ.680 ರಲ್ಲಿ ನನಗೆ ಯಾವುದೇ ಹಕ್ಕಿಲ್ಲ ಹಾಗೂ ಪಾಲು ಕೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿ 12, 14 ಮತ್ತು 16 ರವರು ನಮ್ಮ ಚಿಕ್ಕಪ್ಪನ ಸ್ವಯಾರ್ಜಿತ ಆಸ್ತಿಯನ್ನು ಖರೀದಿ ಮಾಡಿರುವುದರಿಂದ ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಇನ್ನುಳಿದ ನನ್ನ ಅತ್ತೆಯರನ್ನು ಈ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲವಾದ್ದರಿಂದ ನನಗೆ ಪರಿಹಾರ ಪಡೆಯಲು ಆಗುವುದಿಲ್ಲ ಎಂದರೆ ಸರಿಯಲ್ಲ. 12, 14 ಮತ್ತು 16 ನೇ ಪ್ರತಿವಾದಿಗಳು ಕಾನೂನು ಬದ್ಧ ಖರೀದಿದಾರರಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಇನ್ನು ಉಳಿದ ಪ್ರತಿವಾದಿಯರ ಪರ ಉಳಿದ ವಕೀಲರಿಂದಃ**

11 ನೇ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ಅವರ ಪರವಾಗಿ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.